

ಬರಗಾಲ, ಯುದ್ಧ ಮತ್ತು ಅನಿಶ್ಚಿತತೆಯ ನಡುವೆ ಹೂಡಿಕೆದಾರನ ನಿರ್ಧಾರ ಹೇಗಿರಬೇಕು?

# ಹೂಡಿಕೆಗೆ ಇದು ಸಕಾಲವೆ?

'ಇದೇ ಹೂಡಿಕೆಗೆ ಸರಿಯಾದ ಸಮಯ' ಎನ್ನುವ ವಾದ ಕೇಳಿಬರುತ್ತಿದೆ. ಮತ್ತೊಂದೆಡೆ 'ಯುದ್ಧದ ಆತಂಕ, ಆರ್ಥಿಕ ಮಂದಗತಿ, ದುಬಾರಿ ದರ, ಉದ್ಯೋಗ ಅಸ್ಥಿರತೆ ಇವೆಲ್ಲವೂ ಹೂಡಿಕೆಗೆ ಅಪಾಯ' ಎನ್ನುವ ಅಭಿಪ್ರಾಯವೂ ಇದೆ.

ಈ ವಿರೋಧಾಭಾಸದ ನಡುವೆ ಸಾಮಾನ್ಯ ಹೂಡಿಕೆದಾರ ಗೊಂದಲಕ್ಕೀಡಾಗುತ್ತಾನೆ. ಮಾರುಕಟ್ಟೆ ಏರಿಳಿತಗಳು, ಜಾಗತಿಕ ಪರಿಸ್ಥಿತಿ, ಪ್ರಕೃತಿ ವೈಪರೀತ್ಯಗಳು ಮತ್ತು ಆರ್ಥಿಕ ಚಕ್ರಗಳು ಹೂಡಿಕೆ ನಿರ್ಧಾರಗಳನ್ನು ನೇರವಾಗಿ ಪ್ರಭಾವಿಸುತ್ತವೆ.

ಯಾವ ಸಮಯದಲ್ಲಿ ಹೂಡಿಕೆ ಮಾಡಬೇಕು? ಮಾರುಕಟ್ಟೆ ಸ್ಥಿರವಾಗುವವರೆಗೆ ಕಾಯಬೇಕೆ? ಈ ಪ್ರಶ್ನೆಗೆ ಸರಳ ಉತ್ತರ ಇಲ್ಲ. ಹೂಡಿಕೆಗೆ ಸಮಯಕ್ಕಿಂತ ವಿಧಾನ ಮುಖ್ಯ. ಮಾರುಕಟ್ಟೆಯಲ್ಲಿರುವ ದೊಡ್ಡ ತಪ್ಪುಕಲ್ಪನೆ ಎಂದರೆ 'ಸರಿಯಾದ ಸಮಯ ಹಿಡಿದು ಹೂಡಿಕೆ ಮಾಡಬೇಕು' ಎಂಬುದು. ಸಮಯವನ್ನು ಊಹಿಸುವುದು ಅತ್ಯಂತ ಕಷ್ಟ. ಯುದ್ಧ ಕಾಲದಲ್ಲೂ ಕೆಲವು ವಲಯ ಬೆಳವಣಿಗೆ ಕಂಡಿವೆ. ಮಂದಗತಿಯಲ್ಲೂ ಗುಣಮಟ್ಟದ ಕಂಪನಿಗಳು ಮೌಲ್ಯ ಹೆಚ್ಚಿಸಿಕೊಂಡಿವೆ. ಸಂಕಷ್ಟದ ಅವಧಿಯಲ್ಲಿ ಹೂಡಿಕೆ ಮಾಡಿದವರೇ ದೀರ್ಘಾವಧಿಯಲ್ಲಿ ಉತ್ತಮ ಲಾಭ ಪಡೆದಿದ್ದಾರೆ. ಹೂಡಿಕೆ ಲಾಭದ ಆಟವಲ್ಲ; ಸಹನೆಯ ಪ್ರಯಾಣ.

## ಯುದ್ಧ ಕಾಲಘಟ್ಟ ಮತ್ತು ಮಾರುಕಟ್ಟೆ

ಯುದ್ಧಗಳು ಮಾರುಕಟ್ಟೆಯಲ್ಲಿ ಭಯ ಹುಟ್ಟಿಸುತ್ತವೆ. ತೈಲದ ಬೆಲೆ ಏರಿಕೆ, ಸರಬರಾಜು ಸರಪಳಿಗಳ ವ್ಯತ್ಯಯ, ಕರೆನ್ಸಿ ಅಸ್ಥಿರತೆ, ಬಡ್ಡಿದರ ಬದಲಾವಣೆ. ಅದು ಎಲ್ಲ ವಲಯಗಳಿಗೆ ನಷ್ಟ ತರೋದಿಲ್ಲ. ರಕ್ಷಣೆ, ಇಂಧನ, ತಂತ್ರಜ್ಞಾನ, ಮೂಲಸೌಕರ್ಯ ವಲಯ ಚೇತೋಹಾರಿಯಾಗಿರುತ್ತದೆ.

ಹೂಡಿಕೆದಾರನ ದೃಷ್ಟಿ 'ಸುದ್ದಿ ನೋಡಿ ಭಯಪಡುವುದಲ್ಲ; ಪರಿಣಾಮವನ್ನು ಅರ್ಥಮಾಡಿಕೊಳ್ಳಬೇಕು'. ಯುದ್ಧದ ಸಂದರ್ಭದಲ್ಲಿ ಭಾವನಾತ್ಮಕ ನಿರ್ಧಾರಗಳು ಹೆಚ್ಚು ನಷ್ಟಕ್ಕೆ ಕಾರಣವಾಗುತ್ತವೆ.

## ಬರಗಾಲ ಮತ್ತು ಆರ್ಥಿಕ ಪರಿಣಾಮ

ಭಾರತದಂತಹ ಕೃಷಿ ಆಧಾರಿತ ದೇಶದಲ್ಲಿ ಬರಗಾಲದ ಪರಿಣಾಮ ದೊಡ್ಡದು. ಉತ್ಪಾದನೆ ಕುಸಿತ, ಖರೀದಿ ಶಕ್ತಿ ಇಳಿಕೆ, ದರ ಏರಿಕೆ, ವ್ಯವಸ್ಥೆಯ ಒತ್ತಡ ಕೆಲವು ವಲಯಗಳಿಗೆ ಹಾನಿ ಮಾಡಬಹುದು. ಕೃಷಿ ಸಂಬಂಧಿತ ಕೈಗಾರಿಕೆ, ಗ್ರಾಮೀಣ ಪ್ರದೇಶ ಆಧಾರಿತ ಮಾರಾಟ ವಲಯಗಳು ಸ್ಥಿರವಾಗಿರಬಹುದು. ಬ್ಯಾಂಕಿಂಗ್, ಐಟಿ, ಫಾರ್ಮಾ, ಸೇವಾ ವಲಯಗಳ ಪರಿಸ್ಥಿತಿಯನ್ನು ಸಮಗ್ರವಾಗಿ ವಿಶ್ಲೇಷಿಸಬೇಕು.



■ **ಗಿರೀಶ್ ಸಿ.ಜಿ.**
ಚಾರ್ಟರ್ಡ್ ಅಕೌಂಟೆಂಟ್

ಪ್ರತಿ ಹೂಡಿಕೆಗೂ ರಿಸ್ಕ್ ಇದೆ. ಇಂತಹ ಸಂದರ್ಭದಲ್ಲಿ ಹೂಡಿಕೆದಾರ ಎಷ್ಟು ನಷ್ಟವನ್ನು ತಡೆದುಕೊಳ್ಳಬಲ್ಲ? ತನ್ನ ಹಣ ಎಷ್ಟು ಅವಧಿಗೆ ಹೂಡಿಕೆ ಆಗಿರಬಹುದು? ತುರ್ತು ಅವಶ್ಯಕತೆಗಳಿಗೆ ಹಣ ಇದೆಯೇ? ಇದಕ್ಕೆ ಕಂಡುಕೊಳ್ಳುವ ಉತ್ತರವೇ ನಿಮ್ಮ ರಿಸ್ಕ್ ಪ್ರೊಫೈಲ್.

## ರಿಸ್ಕ್ ಹೇಗೆ ಅಳೆಯಬೇಕು?

ಪ್ರತಿಯೊಬ್ಬರ ಸಾಮರ್ಥ್ಯ ವಿಭಿನ್ನ. ವಯಸ್ಸು, ಆದಾಯ, ಕುಟುಂಬದ ಹೊಣೆಗಾರಿಕೆ, ಸಾಲದ ಒತ್ತಡ, ಗುರಿಗಳು ವಿಭಿನ್ನ ತಂತ್ರಗಳನ್ನು ಬೇಡುತ್ತವೆ. ಹೂಡಿಕೆ ನಿರ್ಧಾರದಲ್ಲಿ ಕೌಶಲ್ಯ ಮುಖ್ಯ. ಇಲ್ಲಿ ಕೌಶಲ್ಯ ಎಂದರೆ ಜ್ಞಾನ + ನಿಯಂತ್ರಣ+ ಯೋಜನೆ. ಎಲ್ಲ ಹಣವನ್ನು ಒಂದೇ ಅಸೆಟ್‌ನಲ್ಲಿ ಹೂಡಬಾರದು. ಅದನ್ನು ಇಕ್ವಿಟಿ, ಡೆಟ್, ಗೋಲ್ಡ್, ರಿಯಲ್ ಎಸ್ಟೇಟ್ ಹೀಗೆ ವಿಭಾಗ ಮಾಡಿಕೊಳ್ಳಬೇಕು.

| 30 ವರ್ಷದ ವ್ಯಕ್ತಿ | 50 ವರ್ಷದ ವ್ಯಕ್ತಿ |
|---|---|
| 60% Equity | 40% Equity |
| 20% Debt | 40% Debt |
| 10% Gold | 10% Gold |
| 10% Cash | 10% Cash |

ಉದಾಹರಣೆ: ಅನಿಶ್ಚಿತ ಮಾರುಕಟ್ಟೆಯಲ್ಲಿ ಎಸ್‌ಐಪಿ (SIP) ಅತ್ಯುತ್ತಮ ವಿಧಾನ. ಹೂಡಿಕೆಯಲ್ಲಿ ದೊಡ್ಡ ಶತ್ರು ಮಾರುಕಟ್ಟೆ ಅಲ್ಲ; ನಮ್ಮ ಮನಸ್ಸು. ಭಯ ಮತ್ತು ದುರಾಸೆ ಎರಡೂ ಅಪಾಯಕಾರಿ. ಭಯದಿಂದ ಮಾರುಕಟ್ಟೆ ಕುಸಿದಾಗ ಮಾರಾಟ ಮಾಡುವುದು. ಮಾರುಕಟ್ಟೆಯಲ್ಲಿ ಏರಿಕೆಯಾದಾಗ ಅತಿ ಹೂಡಿಕೆ ಮಾಡುವ ದುರಾಸೆ ಒಳ್ಳೆಯದಲ್ಲ.

ಇಂದಿನ ಪರಿಸ್ಥಿತಿಯಲ್ಲಿ ಅವಕಾಶಗಳಿವೆಯೇ? ಅನಿಶ್ಚಿತ ಸಂದರ್ಭದಲ್ಲಿ ದೊಡ್ಡ ಅವಕಾಶಗಳು ಹುಟ್ಟುತ್ತವೆ. ಎಲ್ಲ ಹಣ ಬೆಳವಣಿಗೆಗಾಗಿ ಇರಬಾರದು. ಸಮತೋಲನ ಸಾಧಿಸುವುದು ಮುಖ್ಯ. ಮಾರುಕಟ್ಟೆಯಲ್ಲಿ ಯುದ್ಧ, ಬರಗಾಲ, ಮಂದಗತಿ ಶಾಶ್ವತವಲ್ಲ. ಆರ್ಥಿಕ ಚಕ್ರಗಳು ಬದಲಾಗುತ್ತವೆ. ಉತ್ತಮ ಆಸ್ತಿಗಳು ಕ್ರಮೇಣ ಬೆಳೆಯುತ್ತವೆ. ಹೂಡಿಕೆದಾರನಿಗೆ ಶಿಸ್ತು, ತಾಳ್ಮೆ, ನಿರಂತರತೆ ಮುಖ್ಯವಾಗುತ್ತದೆ.

ಹೂಡಿಕೆಗೆ ಇದು ಸರಿಯಾದ ಸಮಯವೇ ಎಂಬ ಪ್ರಶ್ನೆಗೆ ನಿಖರ ಉತ್ತರ ಇಲ್ಲ. 'ಸರಿಯಾದ ಸಮಯ' ಮಾರುಕಟ್ಟೆಯಲ್ಲಿ ಇಲ್ಲ. 'ಸರಿಯಾದ ತಂತ್ರ' ಮಾತ್ರ ಇರುತ್ತದೆ. ಬುದ್ಧಿವಂತ ಹೂಡಿಕೆದಾರ ಪರಿಸ್ಥಿತಿ ಅರ್ಥಮಾಡಿಕೊಳ್ಳುತ್ತಾನೆ. ಹೂಡಿಕೆ ಎಂದರೆ ಭಯದ ವಿರುದ್ಧದ ಯುದ್ಧ. ಮಾಹಿತಿ, ಸಹನೆ ಮತ್ತು ತಂತ್ರ ಇದ್ದರೆ ಅನಿಶ್ಚಿತತೆಯಲ್ಲೂ ಅವಕಾಶ ಸೃಷ್ಟಿಸಬಹುದು. ಒಂದು ಮಾತು: ಹೂಡಿಕೆಯಲ್ಲಿ ಯಶಸ್ಸು ಸಮಯ ಆಯ್ಕೆಯಿಂದ ಅಲ್ಲ; ಸರಿಯಾದ ನಿರ್ಧಾರ ಮತ್ತು ನಿರಂತರತೆಯಿಂದ ಬರುತ್ತದೆ. ■